ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಂಗಳೂರು, ಶುಕ್ರವಾರ, ೨೪, ಜುಲೈ, ೨೦೨೬ (ಶ್ರಾವಣ, ೦೨, ಶಕವರ್ಷ, ೧೯೪೮) BENGALURU, FRIDAY, 24, JULY, 2026 (SHRAVANA , 02, SHAKAVARSHA, 1948)	ಸಂಚಿಕೆ ೧೪೪ Issue 144

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನೆಲಮಂಗಲ ಯೋಜನಾ ಪ್ರಾಧಿಕಾರ

ದೂರವಾಣಿ:96630 46622 :: Email: nelamanganagla.pa@gmail.com

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಕ್ರ.ಸಂ.ನೆಯೋಪ್ರಾ/ಮಹಾಯೋಜನೆ/2026–27 **ದಿನಾಂಕ: 22–07–2026**

ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯಲ್ಲಿ ನಗರೀಕರಣ ಎಲ್ಲೆಯ ಹೊರಭಾಗದಲ್ಲಿನ ವ್ಯವಸಾಯ ವಲಯದಲ್ಲಿ ಪ್ರಸ್ತಾಪಿತ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(1) ರಡಿ ಸರ್ಕಾರದ ಆದೇಶ ಸಂಖ್ಯೆ:ನಅಇ 386 ಬಿಎಂಆರ್ 2025(ಇ), ಬೆಂಗಳೂರು ದಿನಾಂಕ:07–07–2026 ರಂದು ತಾತ್ಕಾಲಿಕ ಅನುಮೋದನೆಯನ್ನು ನೀಡಿರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕವಾಗಿ ಅನುಮೋದನೆಯಾಗಿರುವ ನಕ್ಷೆಗಳನ್ನು ದಿನಾಂಕ:24–07–2026 ರಿಂದ ಈ ಕಛೇರಿಯಲ್ಲಿ ವೀಕ್ಷಣೆಗೆ ಇಡಲಾಗುವುದು. ಹಾಗೂ ಈ ಯೋಜನಾ ಪ್ರಾಧಿಕಾರದ ಜಾಲತಾಣ https://npa.karnataka.gov.in/ ಸಹ ವೀಕ್ಷಿಸಬಹುದಾಗಿದೆ. ಸದರಿ ನಕ್ಷೆಗಳ ಬಗ್ಗೆ ಸಾರ್ವಜನಿಕರು ಸಲಹೆ / ಆಕ್ಷೇಪಣೆಗಳನ್ನು ಈ ಪ್ರಾಧಿಕಾರಕ್ಕೆ ದಿನಾಂಕ:24–07–2026 ರಿಂದ 60 ದಿನಗಳ ಕಾಲಾವಧಿಯೊಳಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ.

ಸಾರ್ವಜನಿಕರು ತಮ್ಮ ಸಲಹೆ / ಆಕ್ಷೇಪಣೆಗಳನ್ನು ಪ್ರಾಧಿಕಾರಕ್ಕೆ ಖುದ್ದಾಗಿ ಅಥವಾ ನೊಂದಣಿ ಅಂಚೆಯ ಮೂಲಕ ಸದಸ್ಯ–ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, 2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123, ಅಥವಾ ಇ–ಮೇಲ್ ಮೂಲಕ nelamangala.pa@gmail.com ಪ್ರಾಧಿಕಾರಕ್ಕೆ ದಿನಾಂಕ:23–09–2026 ರ ಸಂಜೆ 5.30 ಗಂಟೆ ಒಳಗಾಗಿ ತಲುಪುವಂತೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆ/ ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಸಹಿ/–
ಅಧ್ಯಕ್ಷರು,
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ

PD-108

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 2ನೇ ರಾಜಭವನ ರಸ್ತೆ, ಪಿ.ಬಿ.ನಂ.5309, ಬೆಂಗಳೂರು-01
E-mail: nodalofficersam@gmail.com, ದೂರವಾಣಿ ಸಂ:080-22867192

ಸಂ:ಕೃಮಾಇ/ನಿಯವಿ/ಎಂಐಎಸ್‌ಸಿ/04/2026 ದಿನಾಂಕ:20/ 07/2026

:: **ಅಧಿಸೂಚನೆ** ::

ಅಧಿಸೂಚನೆ ಸಂ:ಕೃಮಾಇ/20/ನಿಯವಿ/ಉಮಾ/2022, ದಿ:30/09/2022ರ ಮೂಲಕ ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿಸಲ್ಪಟ್ಟಿರುವ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ಗೊಣಕನಹಳ್ಳಿ ಗ್ರಾಮದ ಪರಿಮಿತಿಯೊಳಗಿನ ಪ್ರದೇಶವನ್ನು ಉಪ ಮಾರುಕಟ್ಟೆ ಎಂದು ಹಾಗೂ ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49 ರಲ್ಲಿ ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸೇರಿದ 9.20 ಎಕರೆ ಜಮೀನನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ಮಾರಾಟ ನಿಯಂತ್ರಣಕ್ಕಾಗಿ ಉಪ ಮಾರುಕಟ್ಟೆ ಪ್ರಾಂಗಣವೆಂದು ಘೋಷಿಸಲಾಗಿದೆ.

ಉಪ ಮಾರುಕಟ್ಟೆ ಪ್ರಾಂಗಣ ನಿರ್ಮಾಣ ಮಾಡಲು ಉದ್ದೇಶಿಸಿ, ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಗೊಣಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ.4 ರಲ್ಲಿನ 15.20 ಎಕರೆ ಜಮೀನನ್ನು ಭೂಸ್ವಾಧೀನ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಕೋಟೆ ಇವರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿಗೆ ಸೌಲಭ್ಯಗಳನ್ನು ಕಲ್ಪಿಸಲು ಭೂಸ್ವಾಧೀನ ಮೂಲಕ ಪಡೆದಿರುವ 15.20 ಎಕರೆ ಜಮೀನಿನಲ್ಲಿ ಕ್ರಮ ವಹಿಸಿದ್ದು, ಹಾಲಿ ಇರುವ ಪ್ರಾಂಗಣದ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಕೆಳಕಂಡ ಚೆಕ್ ಬಂದಿಯನ್ನೊಳಗೊಂಡ ಪ್ರದೇಶವನ್ನು ಅಧಿಕೃತವಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 6(3) ರಡಿಯಲ್ಲಿ ವಿಸ್ತರಣೆಗಾಗಿ 15.20 ಎಕರೆ ಜಮೀನನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿಗಾಗಿ ಘೋಷಣೆ ಮಾಡುವ ಉದ್ದೇಶವನ್ನು ಪ್ರಕಟಿಸಿದ್ದು, ರಾಜ್ಯ ಪತ್ರದಲ್ಲಿ ದಿ:24/06/2026 ಹಾಗೂ ಕನ್ನಡ ದಿನ ಪತ್ರಿಕೆಯಲ್ಲಿ ದಿ:01/07/2026 ರಂದು ಪ್ರಕಟಗೊಳಿಸಿದ್ದು, ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತಗೊಳ್ಳದೇ ಇರುವ ಪ್ರಯುಕ್ತ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಭಕ್ತಗೊಂಡನಹಳ್ಳಿ ಗ್ರಾಮದ 15.20 ಎಕರೆ ಜಮೀನಿನ ಚೆಕ್‌ಬಂದಿ

ಹೊಸಕೋಟೆ ತಾಲ್ಲೂಕು ವ್ಯಾಪ್ತಿಯಲ್ಲಿನ ಗೊಣಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ.4ರ 15.20 ಎಕರೆ ಜಮೀನಿನ ಈ ಕೆಳಗಿನ ಸೀಮಾಬದ್ದ ಸ್ವಳ:

ಪೂರ್ವಕ್ಕೆ : ವಿಜೀಪುರ ಗಡಿ.

ಪಶ್ಚಿಮಕ್ಕೆ : ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಕಾಯ್ದಿರಿಸಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ.4ರ ಉಳಿಕೆ ಜಮೀನು ಹಾಗೂ ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49ರ ಉಳಿಕೆ ಜಮೀನು.(ಆಶ್ರಯ ಯೋಜನೆಗೆ ಮಂಜೂರಾಗಿರುವ ಜಮೀನು)

ಉತ್ತರಕ್ಕೆ : ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.108ರ ಜಮೀನು ಹಾಗೂ ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49ರ ಉಳಿಕೆ ಜಮೀನು.

ದಕ್ಷಿಣಕ್ಕೆ : ಭಕ್ತಗೊಂಡನಹಳ್ಳಿ ಗ್ರಾ0ಮದ ಸರ್ವೆ ನಂ.4ರ ಉಳಿಕೆ ಜಮೀನಿನಲ್ಲಿರುವ ರಸ್ತೆ.

ನಿರ್ದೇಶಕರು

PR-1014

ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಿಎಸ್ 03 ಕೆಡಿಪಿ 2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ.ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:08.07.2026.

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಿಎಸ್ 03 ಕೆಡಿಪಿ 2026 ದಿನಾಂಕ: 24.06.2026ರ ಅಧಿಸೂಚನೆಯನ್ನು ಪರಿಷ್ಕರಿಸಿ, ಈ ಕೆಳಕಂಡಂತೆ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಆದೇಶಿಸಿದೆ.

ಕ್ರ.ಸಂ	ಮಾನ್ಯ ಉಪಮುಖ್ಯಮಂತ್ರಿ ಹಾಗೂ ಮಾನ್ಯ ಸಚಿವರುಗಳ ಹೆಸರು	ಹಂಚಿಕೆ ಮಾಡಲಾದ ಜಿಲ್ಲೆಗಳು
1.	ಡಾ. ಜಿ. ಪರಮೇಶ್ವರ	ತುಮಕೂರು ಮತ್ತು ಚಿತ್ರದುರ್ಗ
2.	ಶ್ರೀ ಕೆ.ಜೆ. ಜಾರ್ಜ್	ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ
3.	ಶ್ರೀ ಕೆ.ಹೆಚ್. ಮುನಿಯಪ್ಪರತಞ	ಬಳ್ಳಾರಿ, ವಿಜಯನಗರ ಮತ್ತು ಬೆಂಗಳೂರು ಗ್ರಾಮಾಂತರ
4.	ಶ್ರೀ ರಾಮಲಿಂಗಾರೆಡ್ಡಿ	ಬೆಂಗಳೂರು ದಕ್ಷಿಣ ಮತ್ತು ಮಂಡ್ಯ
5.	ಶ್ರೀ ಎಂ.ಬಿ.ಪಾಟೀಲ್	ವಿಜಯಪುರ ಮತ್ತು ಬಾಗಲಕೋಟೆ
6.	ಶ್ರೀ ಕೃಷ್ಣ ಭೈರೇಗೌಡ	ಬೆಂಗಳೂರು ನಗರ ಮತ್ತು ಹಾಸನ
7.	ಶ್ರೀ ಈಶ್ವರ್ ಖಂಡ್ರೆ	ಬೀದರ್ ಮತ್ತು ಗದಗ

8.	ಶ್ರೀ ಸತೀಶ್ ಜಾರಕಿಹೊಳಿ	ಬೆಳಗಾವಿ, ಧಾರವಾಡ ಮತ್ತು ಹಾವೇರಿ
9.	ಶ್ರೀ ಪ್ರಿಯಾಂಕ್ ಖರ್ಗೆ	ಕಲಬುರ್ಗಿ ಮತ್ತು ಯಾದಗಿರಿ
10.	ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್	ರಾಯಚೂರು ಮತ್ತು ಕೊಪ್ಪಳ
11.	ಶ್ರೀ ಯು.ಟಿ.ಖಾದರ್ ಫರೀದ್	ಉಡುಪಿ, ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ
12.	ಶ್ರೀ ಭೈರತಿ ಸುರೇಶ್	ಕೋಲಾರ ಮತ್ತು ಚಿಕ್ಕಬಳ್ಳಾಪುರ
13.	ಡಾ. ಯತೀಂದ್ರ ಸಿದ್ದರಾಮಯ್ಯ	ಮೈಸೂರು ಮತ್ತು ಚಾಮರಾಜನಗರ

(ಮಾನ್ಯ ಮುಖ್ಯಮಂತ್ರಿಯವರಿಂದ
ಅನುಮೋದಿಸಲ್ಪಟ್ಟಿದೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಆರ್.ಮಧುಸೂದನ್)
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-3)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

PR-1015

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ದೊಡ್ಡಬಳ್ಳಾಪುರ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ:09/2024-25 ದಿನಾಂಕ: 28/07/2024

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ.. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಪಿರ್ಯಾದಿ : ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ, ದೊಡ್ಡಬಳ್ಳಾಪುರ ವಲಯ.

ಎದುರುದಾರರು: 1) ಶ್ರೀ.ಗಣೇಶ್ ಬಿನ್ ಲೇ|| ನಾರಾಯಣನಾಯ್ಕ, ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾ||
2) ಶ್ರೀ.ಸುಬ್ರಮಣ್ಯ ಬಿನ್ ಲೇ|| ಗುಂಡಾನಾಯ್ಕ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾ||
3) ಶ್ರೀ.ಕೃಷ್ಣನಾಯ್ಕ ಬಿನ್ ರೆಡ್ಡಿನಾಯ್ಕ, ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾ||
4) ಶ್ರೀಮತಿ ಲಕ್ಷ್ಮೀಬಾಯಿ ಕೋಂ ಲೇ|| ನಾರಾಯಣನಾಯ್ಕ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾ||

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ 28/07/24 ರ ಮುಂಜಾನೆ ಸುಮಾರು 3.00 ಗಂಟೆ ಸಮಯದಲ್ಲಿ ದೊಡ್ಡಬಳ್ಳಾಪುರ ಟೌನ್ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿಗಳು ಗಸ್ತು ಮಾಡುತ್ತಿದ್ದಾಗ ಮೇಲಿನನಾಯಕರಂಡಹಳ್ಳಿ ಗಸ್ತು, ಮೇಲಿನನಾಯಕರಂಡಹಳ್ಳಿ ಗ್ರಾಮದ ಸರ್ವೆ ನಂ:37ರ ಅರಣ್ಯ

ಪ್ರದೇಶದಲ್ಲಿ ಸಂಚರಿಸುತ್ತಿದ್ದ ವಾಹನವನ್ನು ತಡೆದು ಪರಿಶೀಲಿಸಲಾಗಿ, ಸದರಿ ವಾಹನದಲ್ಲಿ ನೀಲಗಿರಿ ಮರಗಳನ್ನು ತುಂಬಿರುವುದು ಕಂಡುಬಂದಿದ್ದು, ಸದರಿ ವಾಹನದ ಸಂಖ್ಯಾ ಫಲಕದ ಮೇಲೆ ಕೆಎ-43-ಎ-1995 ಎಂದು ಇದ್ದು ಅಶೋಕ್ ಲೈಲ್ಯಾಂಡ್ ವಾಹನವಾಗಿರುತ್ತದೆ. ಸದರಿ ವಾಹನದಲ್ಲಿ ಮೂರು ಆಸಾಮಿಗಳಿದ್ದು ವಾಹನದಲ್ಲಿರುವ ನೀಲಗಿರಿ ಮರಗಳ ಬಗ್ಗೆ ವಿಚಾರಿಸಲಾಗಿ ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಕತ್ತಾವಣೆ ಮಾಡಿ ಸಾಗಾಣಿಕೆ ಮಾಡುತ್ತಿರುವುದು ತಿಳಿದು ಬಂದಿರುತ್ತದೆ. ಸದರಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿರುವ ಸ್ಥಳ ಪರಿಶೀಲಿಸಿ ನೋಡಲಾಗಿ ಸದರಿ ಸ್ಥಳವು ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶವಾಗಿದ್ದು, ಸದರಿ ಅರಣ್ಯ ಪ್ರದೇಶದಲ್ಲಿ ಒಟ್ಟು 47 ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ನೀಲಗಿರಿ ಮರಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಕಡಿದು ಸಾಗಾಣಿಕೆ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಆಸಾಮಿಗಳ ವಿವರಗಳನ್ನು ಕೇಳಲಾಗಿ 1) ಗಣೇಶ್ ಬಿನ್ ಲೇ|| ನಾರಾಯಣನಾಯ್ಕ, ಮೇಲಿನನಾಯಕರಂಡಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, 2) ಸುಬ್ರಮಣ್ಯ ಬಿನ್ ಲೇ|| ಗುಂಡಾನಾಯ್ಕ, ಮೇಲಿನನಾಯಕರಂಡಹಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, 3)ಕೃಷ್ಣನಾಯ್ಕ ಬಿನ್ ರೆಡ್ಡಿನಾಯ್ಕ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ ಎಂದು ತಿಳಿಸಿರುತ್ತಾರೆ. ವಾಹನದಲ್ಲಿದ್ದ ಮಾಲನ್ನು ಅಳತೆ ಮಾಡಲಾಗಿ ಅಂದಾಜು 4.5 ಘ.ಮೀ ಇರುತ್ತದೆ. ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನೀಲಗಿರಿ ಮರಗಳನ್ನು ಕಡಿದು ಸಾಗಿಸುತ್ತಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24(e), 71(a) ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ರ ಉಲ್ಲಂಘನೆಯಾಗಿರುವುದರಿಂದ ಸದರಿ ವಾಹನದಲ್ಲಿದ್ದ ನೀಲಗಿರಿ ಮರಗಳು ಮತ್ತು ವಾಹನ ಸಂಖ್ಯೆ:ಕೆಎ-43-ಎ-1995 ಅಶೋಕ್ ಲೈಲ್ಯಾಂಡ್‌ನ್ನು ಸರ್ಕಾರದ ಪರ ಅಮಾನತ್ತು ಪಡಿಸಲು ತೀರ್ಮಾನಿಸಿ ಮುಂಜಾನೆ ಸುಮಾರು 3.00 ಗಂಟೆಯಾಗಿರುವುದರಿಂದ ಸಾರ್ವಜನಿಕರು ಯಾರೂ ಇಲ್ಲದಿರುವುದರಿಂದ ಇಲಾಖೆಯ ಸಿಬ್ಬಂದಿಯಾದ ಶ್ರೀ. ಚಂದ್ರಶೇಖರಯ್ಯ, ಉಪ ವಲಯ ಅರಣ್ಯಾಧಿಕಾರಿ, ಎಸ್.ಎಸ್. ಘಾಟಿ ಶಾಖೆ, ದೊಡ್ಡಬಳ್ಳಾಪುರ ವಲಯ ಮತ್ತು ಶ್ರೀ. ಕಿರಣ್ ಆನಂದ್ ದಡ್ಡಿ, ಗಸ್ತು ಅರಣ್ಯ ಪಾಲಕ, ದೊಡ್ಡಬಳ್ಳಾಪುರ ಟೌನ್ ಬೀಟ್, ದೊಡ್ಡಬಳ್ಳಾಪುರ ವಲಯ ರವರುಗಳನ್ನು ಪಂಚಾಯ್ತಿದಾರರನ್ನಾಗಿಸಲು ತೀರ್ಮಾನಿಸಿ, ದೊಡ್ಡಬಳ್ಳಾಪುರ ಟೌನ್ ಶಾಖೆಯ ಉಪ ವಲಯ ಅರಣ್ಯಾಧಿಕಾರಿಯಾದ ಶ್ರೀಮತಿ. ಲಕ್ಷ್ಮೀ ಹೆಚ್.ಡಿ ರವರ ಸಮಕ್ಷಮದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಆರೋಪಿಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24(e), 71(a) ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ರಡಿಯಲ್ಲಿ ಅರಣ್ಯ ಅಪರಾಧ ಮೊಕದ್ದಮೆ ಸಂಖ್ಯೆ : 09/2024-25ನ್ನು ದಾಖಲಿಸಿಕೊಂಡು ಅಮಾನತ್ತು ಪಡಿಸಿಕೊಂಡ ಅಶೋಕ್ ಲೈಲ್ಯಾಂಡ್ ವಾಹನ ಸಂಖ್ಯೆ:ಕೆಎ-43-ಎ-1995 ಮತ್ತು ಮಾಲನ್ನು ವಲಯ ಅರಣ್ಯಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ಇಲ್ಲಿಗೆ ತಂದು ಪ್ರಕರಣದ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿಗಳು, ದೊಡ್ಡಬಳ್ಳಾಪುರ ವಲಯ ರವರ ಗಮನಕ್ಕೆ ತಂದಿರುತ್ತಾರೆ. ಪ್ರಕರಣದ ಕುರಿತು ಮುಂದಿನ ಕ್ರಮಕ್ಕಾಗಿ ತನಿಖೆಯನ್ನು ಕೈಗೊಂಡ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ರವರು ಮೇಲಿನನಾಯಕರಂಡಹಳ್ಳಿ ಸರ್ವೆ ನಂ 37 ರ ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮರಗಳನ್ನುಅಕ್ರಮ ಕಡಿತಲೆ ಮಾಡಿರುವ ಸ್ಥಳ ಪರಿಶೀಲನೆ ಮಾಡಲಾಗಿ 47 ನೀಲಗಿರಿ ಮರಗಳನ್ನು ಕಡಿತಲೆ ಮಾಡಿದ್ದು, ನೀಲಗಿರಿ ಬುಡಗಳು ಸ್ಥಳದಲ್ಲಿರುವುದು ಕಂಡುಬಂದಿರುತ್ತದೆ. ಅಮಾನತ್ತು ಪಡಿಸಿರುವ ಮಾಲಿಗೂ ಸ್ಥಳದಲ್ಲಿರುವ ನೀಲಗಿರಿ ಬುಡಗಳಿಗೆ ತಾಳೆ ಇರುವುದು ಕಂಡುಬಂದಿರುತ್ತದೆ. ಮೇಲಿನನಾಯಕರಂಡಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ 4.50 ಘ.ಮೀ ನೀಲಗಿರಿ ಮರಗಳನ್ನು ಕಡಿದು ಸಾಗಿಸುತ್ತಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24(e), 71(a) ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ರ ಉಲ್ಲಂಘನೆಯಾಗಿರುವುದು ದೃಢಪಟ್ಟಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ 71(ಎ) ರಡಿ ಕ್ರಮ ಕೈಗೊಳ್ಳುವಂತೆ ತನಿಖಾಧಿಕಾರಿಗಳಾದ ವಲಯ ಅರಣ್ಯಾಧಿಕಾರಿ ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ರವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದ ಮುಂದಿನ ತನಿಖೆಯ ಸಂದರ್ಭದಲ್ಲಿ, ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಕೆಎ-43-ಎ-1995 ಅಶೋಕ್ ಲೈಲ್ಯಾಂಡ್ ವಾಹನದ 'B' Extract ಪ್ರಕಾರ Smt. LAKSHMI BAI W/o NARAYANA NAIK.T.

#025, Melinanaikarandhalli, Doddaballapura, Karnataka-561203 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಸದರಿ ಶ್ರೀಮತಿ. ಲಕ್ಷ್ಮೀಬಾಯಿ ಕೋಂ ನಾರಾಯಣನಾಯ್ಕ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು ಇವರು ಮೇಲ್ಕಂಡ ಪ್ರಕರಣದಲ್ಲಿ ಎ4 ಆರೋಪಿತರಾಗಿರುತ್ತಾರೆ. ಅದರಂತೆ ಜಪ್ತು ವಾಹನದ ಮಾಲೀಕರಾದ ಶ್ರೀಮತಿ.ಲಕ್ಷ್ಮೀಬಾಯಿ ಕೋಂ ನಾರಾಯಣನಾಯ್ಕ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ:07.12.2024, 20.12.2024, 27.05.2025, 21.07.2025, 29.07.2025, 20.08.2025 ಮತ್ತು 06.09.2025 ಹೊರಡಿಸಿ ಈ ನ್ಯಾಯಾಲಯದಿಂದ ವಾಹನದ ಮಾಲೀಕರ ಗಮನಕ್ಕೆ ತರಲಾಗಿರುತ್ತದೆ. ಈ ವಾಹನದ ಮಾಲೀಕತ್ವದ ಬಗ್ಗೆ ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಶ್ರೀಮತಿ ಲಕ್ಷ್ಮೀಬಾಯಿ ಕೋಂ ಲೇ|| ನಾರಾಯಣನಾಯ್ಕ ರವರು ಹಾಜರಾಗಿ ದೊಡ್ಡಬಳ್ಳಾಪುರ ವಲಯದ ಅರಣ್ಯ ಅಪರಾಧ ಮೊಕದ್ದಮೆ ಮೊ.ಸಂ:09/2024-25 ರಲ್ಲಿ ವಶಪಡಿಸಿಕೊಳ್ಳಲಾಗಿರುವ ಕೆಎ-43-ಎ-1995 ಅಶೋಕ್ ಲೈಲ್ಯಾಂಡ್ ವಾಹನವು ತನ್ನ ಹೆಸರಿನಲ್ಲಿದ್ದು ಸದರಿ ವಾಹನವನ್ನು ತಾನು ಬಾಡಿಗೆಗೆ ನೀಡುತ್ತಿದ್ದು ತನ್ನ ಮಗನಾದ ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ತನ್ನ ಗಮನಕ್ಕೆ ತಾರದೆ ಸದರಿ ವಾಹನವನ್ನು ನೀಲಗಿರಿ ಸೌದೆಯನ್ನು ತರಲು ತೆಗೆದುಕೊಂಡು ಹೋಗಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಈ ವಿಷಯದ ಬಗ್ಗೆ ತನಗೆ ಯಾವುದೇ ಮಾಹಿತಿ ಇರುವುದಿಲ್ಲ ಆದುದರಿಂದ ತನ್ನ ವಾಹನವನ್ನು ಬಿಡುಗಡೆಗೊಳಿಸಬೇಕೆಂದು ಈ ನ್ಯಾಯಾಲಯದಲ್ಲಿ ಕೋರಿರುತ್ತಾರೆ.

3. ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಪ್ರಕರಣದ ಎ1 ಗಣೇಶ ಬಿನ್ ಲೇಟ್ ನಾರಾಯಣನಾಯ್ಕ ಇವರು ಹಾಜರಾಗಿದ್ದು, ವಿಚಾರಣೆ ಸಮಯದಲ್ಲಿ ತಾನು ಮೇಲಿನನಾಯಕರಂಡಹಳ್ಳಿ ಅರಣ್ಯದಲ್ಲಿ ಮರಗಳನ್ನು ಕತ್ತಾವಣೆ ಮಾಡಿ ಅಶೋಕ ಲೈಲ್ಯಾಂಡ್ ವಾಹನ ಸಂಖ್ಯೆ: KA-43 A-1995 ರಲ್ಲಿ ನೀಲಗಿರಿ ಸೌದೆಯನ್ನು ತುಂಬಿಕೊಂಡು ಬರುವಾಗ ಅರಣ್ಯಾಧಿಕಾರಿಗಳು ದಸ್ತಗಿರಿ ಮಾಡಿ ಅರಣ್ಯ ಅಧಿಕಾರಿಗಳು ಕಛೇರಿಗೆ ಕರೆದುಕೊಂಡು ಬಂದಿರುವುದು ನಿಜವಾಗಿರುತ್ತದೆ. ಮೇಲ್ಕಂಡ ವಾಹನವನ್ನು ದಿನಾಂಕ: 28-07-2024 ರಂದು ತಾನೇ ಚಲಾಯಿಸಿರುತ್ತೇನೆ. ಸದರಿ ವಾಹನದ ಮಾಲೀಕರಾದ ಶ್ರೀಮತಿ ಲಕ್ಷ್ಮೀಬಾಯಿ ಕೋಂ ಲೇಟ್ ನಾರಾಯಣನಾಯ್ಕ, ಕರೇನಹಳ್ಳಿ ವಾಸಿ. ದೊಡ್ಡಬಳ್ಳಾಪುರ ರವರ ಗಮನಕ್ಕೆ ತಿಳಿಸದೆ ಮನೆಯ ಉಪಯೋಗಕ್ಕೆ ನೀಲಗಿರಿ ಸೌದೆ ತರಲು ವಾಹನವನ್ನು ಬಳಸಿರುತ್ತೇನೆ. ಮೇಲಿನನಾಯಕರಂಡಹಳ್ಳಿ ಗುಡ್ಡದಲ್ಲಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ಸೌದೆಗಳನ್ನಾಗಿ ಪರಿವರ್ತಿಸಿ ಸ್ವಂತ ಉಪಯೋಗಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದು ನಿಜವಾಗಿರುತ್ತದೆ. ಸುಬ್ರಮಣ್ಯ ಬಿನ್ ಲೇ/ಗುಂಡಾನಾಯ್ಕ, ಮೇಲಿನ ನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು ಕೃಷ್ಣಾನಾಯ್ಕ ಬಿನ್ ರೆಡ್ಡಿನಾಯ್ಕ, 55 ವರ್ಷ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು ಎಂಬ ಇಬ್ಬರುಗಳು ತನ್ನ ಜೊತೆ ಈ ಕೃತ್ಯದಲ್ಲಿ ಭಾಗಿಯಾಗಿರುತ್ತಾರೆ. ನಂತರ ಅರಣ್ಯಾಧಿಕಾರಿಗಳು ಅಮಾನತ್ತು ಪಡಿಸಿರುವ ನೀಲಗಿರಿ ಸೌದೆಯನ್ನು ಕತ್ತಾವಣೆ ಮಾಡಿದ ಮರದ ಜಾಗದ ಬಗ್ಗೆ ವಿಚಾರಿಸಿದ್ದು, ಅರಣ್ಯಾಧಿಕಾರಿಗಳಿಗೆ ನೀಲಗಿರಿ ಮರ ಕತ್ತಾವಣೆ ಮಾಡಿದ ಜಾಗವನ್ನು ತೋರಿಸಿರುತ್ತೇನೆ. ಸದರಿ ಜಾಗವು ಅರಣ್ಯ ಪ್ರದೇಶವೆಂಬುದು ತನಗೆ ತಿಳಿದಿರುವುದಿಲ್ಲ. ನೀಲಗಿರಿ ಮರಗಳ ಅಕ್ರಮ ಕಡಿತಲೆ ಕೃತ್ಯದಲ್ಲಿ ತಾವು ಮೂರು ಜನ ಭಾಗಿಯಾಗಿರುವುದು ಸತ್ಯವಾಗಿದ್ದು, ಅರಣ್ಯ ಪ್ರದೇಶವೆಂದು ತಿಳಿಯದೆ ತಾನು ಈ ರೀತಿ ತಪ್ಪು ಮಾಡಿದ್ದು, ಈ ತಪ್ಪು ತನ್ನ ಕಡಿಮೆ ತಿಳುವಳಿಕೆಯಿಂದ ಆಗಿದ್ದು, ಇನ್ನು ಮುಂದೆ ಇಂತಹ ತಪ್ಪು ಮಾಡುವುದಿಲ್ಲ. ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕದೆ ಇಲಾಖಾ ಹಂತದಲ್ಲಿಯೇ ಇತ್ಯರ್ಥ ಪಡಿಸಿಕೊಡಬೇಕೆಂದು ಕೋರಿರುತ್ತಾರೆ.

4. ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಪ್ರಕರಣದ ಎ2 ಸುಬ್ರಮಣ್ಯ ಬಿನ್ ಲೇ||ಗುಂಡಾನಾಯ್ಕ, ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಜರಾಗಿ ಅರಣ್ಯ ಮೊಕದ್ದಮೆ ಸಂಖ್ಯೆ: 09/2024-25

ದಿನಾಂಕ:28-07-2024ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದು, ತನ್ನ ಮಾವನ ಮಗನಾದ ಶ್ರೀ. ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ರವರು ಆ ದಿನ ತನನ್ನು ಕರೆದು ಮನೆಯಲ್ಲಿ ಸೌದೆಯಿಲ್ಲದ ಕಾರಣ ಸೌದೆಯನ್ನು ತರಲು ತನ್ನ ಜೊತೆ ಬರುವಂತೆ ಕೇಳಿದ್ದು ಅದರಂತೆ ತಾನು ಮೇಲಿನನಾಯಕರಂಡಹಳ್ಳಿ ಗಿಡಕ್ಕೆ ತೆರಳಿ ನೀಲಗಿರಿ ಮರದ ಸೌದೆಗಳನ್ನು ಸಂಗ್ರಹಿಸಿ ವಾಹನ ಸಂಖ್ಯೆ: KA-43 A-1995 ರಲ್ಲಿ ನೀಲಗಿರಿ ಸೌದೆಯನ್ನು ತುಂಬಿಕೊಂಡು ಬರುವಾಗ ಅರಣ್ಯಾಧಿಕಾರಿಗಳು ದಸ್ತಗಿರಿ ಮಾಡಿ, ಅರಣ್ಯಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿರುವುದು ನಿಜವಾಗಿರುತ್ತದೆ. ನಂತರ ಅರಣ್ಯಾಧಿಕಾರಿಗಳು ಅಮಾನತ್ತು ಪಡಿಸಿರುವ ನೀಲಗಿರಿ ಸೌದೆಯನ್ನು ಕತ್ತಾವಣೆ ಮಾಡಿದ ಮರದ ಜಾಗದ ಬಗ್ಗೆ ವಿಚಾರಿಸಿದ್ದು, ಅರಣ್ಯಾಧಿಕಾರಿಗಳಿಗೆ ನೀಲಗಿರಿ ಮರ ಕತ್ತಾವಣೆ ಮಾಡಿದ ಜಾಗವನ್ನು ತೋರಿಸಿರುತ್ತೇನೆ. ಸದರಿ ಜಾಗವು ಅರಣ್ಯ ಪ್ರದೇಶವೆಂಬುದು ತನಗೆ ತಿಳಿದಿರುವುದಿಲ್ಲ. ನೀಲಗಿರಿ ಮರಗಳ ಕಡಿತಲೆ ಕೃತ್ಯದಲ್ಲಿ ತಾವು ಮೂರು ಜನ ಭಾಗಿಯಾಗಿರುವುದು ಸತ್ಯವಾಗಿದ್ದು, ಅರಣ್ಯ ಪ್ರದೇಶವೆಂದು ತಿಳಿಯದೆ ತಾನು ಈ ರೀತಿ ತಪ್ಪು ಮಾಡಿದ್ದು, ಈ ತಪ್ಪು ತನ್ನ ಕಡಿಮೆ ತಿಳುವಳಿಕೆಯಿಂದ ಆಗಿದ್ದು, ಇನ್ನು ಮುಂದೆ ಇಂತಹ ತಪ್ಪು ಮಾಡುವುದಿಲ್ಲ. ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕದೆ ಇಲಾಖಾ ಹಂತದಲ್ಲಿಯೇ ಇತ್ಯರ್ಥ ಪಡಿಸಿಕೊಡಬೇಕೆಂದು ಕೋರಿರುತ್ತಾರೆ.

5. ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಪ್ರಕರಣದ ಎ3 ಹೆಸರು: ಕೃಷ್ಣನಾಯ್ಕ ಬಿನ್ ರೆಡ್ಡಿನಾಯ್ಕ ಮೇಲಿನನಾಯಕರಂಡಹಳ್ಳಿ ಗ್ರಾಮ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಹಾಜರಾಗಿ ಅರಣ್ಯ ಮೊಕದ್ದಮೆ ಸಂಖ್ಯೆ: 09/2024-25 ದಿನಾಂಕ:28-07-2024ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದು, ಶ್ರೀ. ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ರವರು ತನ್ನ ಊರಿನವರಾಗಿದ್ದು, ತಾನು ಅವರೊಂದಿಗೆ ಕೂಲಿ ಕೆಲಸವನ್ನು ಮಾಡುತ್ತಿರುತ್ತೇನೆ. ಶ್ರೀ. ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ಆ ದಿನ ತನ್ನನ್ನು ಕರೆದು ಮನೆಯಲ್ಲಿ ಸೌದೆಯಿಲ್ಲದ ಕಾರಣ ಸೌದೆಯನ್ನು ತರಲು ತನ್ನ ಜೊತೆ ಬರುವಂತೆ ಕೇಳಿದ್ದು ಅದರಂತೆ ತಾನು ಮೇಲಿನನಾಯಕರಂಡಹಳ್ಳಿ ಗಿಡಕ್ಕೆ ತೆರಳಿ ನೀಲಗಿರಿ ಮರದ ಸೌದೆಗಳನ್ನು ಸಂಗ್ರಹಿಸಿ ವಾಹನ ಸಂಖ್ಯೆ: KA-43 A-1995 ರಲ್ಲಿ ನೀಲಗಿರಿ ಸೌದೆಯನ್ನು ತುಂಬಿಕೊಂಡು ಬರುವಾಗ ಅರಣ್ಯಾಧಿಕಾರಿಗಳು ದಸ್ತಗಿರಿ ಮಾಡಿ, ಅರಣ್ಯಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಬಂದಿರುವುದು ನಿಜವಾಗಿರುತ್ತದೆ. ನಂತರ ಅರಣ್ಯಾಧಿಕಾರಿಗಳು ಅಮಾನತ್ತು ಪಡಿಸಿರುವ ನೀಲಗಿರಿ ಸೌದೆಯನ್ನು ಕತ್ತಾವಣೆ ಮಾಡಿದ ಮರದ ಜಾಗದ ಬಗ್ಗೆ ವಿಚಾರಿಸಿದ್ದು, ಅರಣ್ಯಾಧಿಕಾರಿಗಳಿಗೆ ನೀಲಗಿರಿ ಮರ ಕತ್ತಾವಣೆ ಮಾಡಿದ ಜಾಗವನ್ನು ತೋರಿಸಿರುತ್ತೇನೆ. ಸದರಿ ಜಾಗವು ಅರಣ್ಯ ಪ್ರದೇಶವೆಂಬುದು ತನಗೆ ತಿಳಿದಿರುವುದಿಲ್ಲ. ನೀಲಗಿರಿ ಮರಗಳ ಕಡಿತಲೆ ಕೃತ್ಯದಲ್ಲಿ ಶ್ರೀ. ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ರವರೊಂದಿಗೆ ತಾನು ಭಾಗಿಯಾಗಿರುವುದು ಸತ್ಯವಾಗಿದ್ದು, ಅರಣ್ಯ ಪ್ರದೇಶವೆಂದು ತಿಳಿಯದೆ ತಾನು ಈ ರೀತಿ ತಪ್ಪು ಮಾಡಿದ್ದು, ಈ ತಪ್ಪು ತನ್ನ ಕಡಿಮೆ ತಿಳುವಳಿಕೆಯಿಂದ ಆಗಿದ್ದು, ಇನ್ನು ಮುಂದೆ ಇಂತಹ ತಪ್ಪು ಮಾಡುವುದಿಲ್ಲ. ಈ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕದೆ ಇಲಾಖಾ ಹಂತದಲ್ಲಿಯೇ ಇತ್ಯರ್ಥ ಪಡಿಸಿಕೊಡಬೇಕೆಂದು ಕೋರಿರುತ್ತಾರೆ.

6. ಅಭಿಯೋಜನೆ ಪರ ಸಾಕ್ಷಿದಾರರಾದ ಶ್ರೀಮತಿ ಲಕ್ಷ್ಮೀ ಹೆಚ್.ಡಿ., ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ರವರು ದಿನಾಂಕ:03.09.2025 ರಂದು ನಡೆದ ವಿಚಾರಣೆಗೆ ಹಾಜರಾಗಿ ದಿನಾಂಕ:28.07.2024 ರಂದು ಮುಂಜಾನೆ ಸುಮಾರು 3:00 ಗಂಟೆ ಸಮಯದಲ್ಲಿ ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ಒಂದು ಗೂಡ್ಸ್ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದಾಗ, ವಾಹನ ಸಂಖ್ಯೆ: ಕೆಎ-43-ಎ-1995 ಅಶೋಕ್ ಲೈಲ್ಯಾಂಡ್ ವಾಹನವನ್ನು ಅಮಾನತ್ತು ಪಡಿಸಿರುವುದು ನಿಜವಿರುತ್ತದೆ, ಅಲ್ಲದೇ ಸದರಿ ಮಾಲಿನ ಸಮೇತ ವಾಹನವನ್ನು ಅಮಾನತ್ತು ಮಾಡಿ ಪ್ರಕರಣ ದಾಖಲಿಸಲಾಗಿರುತ್ತದೆ. ಸದರಿ ದಿನದಂದು ಅಪರಾಧ ಪ್ರಕರಣ ನಡೆದಿರುವುದು ನಿಜವಾಗಿರುತ್ತದೆಂದು ಈ ನ್ಯಾಯಾಲದಲ್ಲಿ ಹೇಳಿಕೆ ನೀಡಿರುತ್ತಾರೆ.

7. ಅಭಿಯೋಜನೆ ಪರ ಮತ್ತೊಬ್ಬ ಸಾಕ್ಷಿದಾರರಾದ ಚಂದ್ರಶೇಖರಯ್ಯ.ಎಲ್., ಉಪವಲಯಾರಣ್ಯಾಧಿಕಾರಿ ಎಸ್ ಎಸ್ ಘಾಟಿ ಶಾಖೆ, ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ರವರು ದಿನಾಂಕ: 03/09/2025 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ವಿಭಾಗ ದೇವನಹಳ್ಳಿ ರವರ ನ್ಯಾಯಾಲಯದಲ್ಲಿ ಅರಣ್ಯ ಮೊಕದ್ದಮೆ ಸಂಖ್ಯೆ:09/2024-25 ದಿನಾಂಕ 28/07/2024ಕ್ಕೆ ಸಂಬಂಧಿಸಿದಂತೆ ಹೇಳಿಕೆಯನ್ನು ನೀಡಿದ್ದು, ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ಇವರಿಗೆ ಬಂದ ಖಚಿತ ವರ್ತಮಾನದಂತೆ ಮೇಲಿನನಾಯಕನಹಳ್ಳಿ ರಾಜ್ಯ ಅರಣ್ಯ ಪ್ರದೇಶದಲ್ಲಿ ಮರಕಡಿದು ಸಾಗಾಣಿಕೆ ಮಾಡುತ್ತಿರುವ ಮರಗಳ್ಳರನ್ನು ಹಿಡಿಯುವ ಸಲುವಾಗಿ ಸದರಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಗಸ್ತು ಮಾಡುವ ಸಂಧರ್ಭದಲ್ಲಿ ದಿನಾಂಕ: 28/07/2024 ಬೆಳಗಿನಜಾವ ಸುಮಾರು 3:00 ಗಂಟೆ ಸಮಯದಲ್ಲಿ ಮೇಲಿನನಾಯಕನಹಳ್ಳಿ ರಾಜ್ಯ ಅರಣ್ಯ ಪ್ರದೇಶದಲ್ಲಿ ಒಂದು ಗೂಡ್ಸ್ ವಾಹನವು ಬಂದಿರುತ್ತದೆ. ಸದರಿ ವಾಹವನ್ನು ಸಿಬ್ಬಂದಿಗಳೊಂದಿಗೆ ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಆ ವಾಹನವು ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನವಾಗಿದ್ದು ವಾಹನ ಸಂಖ್ಯೆ: KA-43-A-1995 ಆಗಿರುತ್ತದೆ. ಸದರಿ ವಾಹನದಲ್ಲಿ ನೀಲಗಿರಿ ಮರಗಳನ್ನು ಕಡಿದು ತುಂಬಿರುವುದು ಕಂಡುಬಂದಿದ್ದು, ವಾಹನದಲ್ಲಿ ಮೂರು ಜನ ಆಸಾಮಿಗಳು ಇರುವುದು ಕಂಡುಬಂದಿರುತ್ತದೆ. ಸದರಿ ಕೃತ್ಯವು ಅರಣ್ಯ ಕಾನೂನಿನ ಉಲ್ಲಂಘನೆಯಾದ್ದರಿಂದ ಉಪ ವಲಯ ಅರಣ್ಯಾಧಿಕಾರಿಗಳು ಮೊಕದ್ದಮೆ ದಾಖಲಿಸಲು ನಿರ್ಧರಿಸಿ, ಸದರಿ ಕೃತ್ಯದ ಬಗ್ಗೆ ಮಹಜರು ಜರುಗಿಸಿಕೊಡಲು ಉಪ ವಲಯ ಅರಣ್ಯಾಧಿಕಾರಿಗಳು ಕೋರಿದಾಗ ಸದರಿ ಪ್ರಕರಣದ ಮಹಜರ್ ಕ್ರಮಕ್ಕೆ ಸಹಕರಿಸಿರುತ್ತೇನೆ. ಸದರಿ ಮಹಜರ್‌ನಲ್ಲಿರುವ ಸಹಿ ತನ್ನದೇ ಆಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.

8. ಅಭಿಯೋಜನೆ ಪರ ಮತ್ತೊಬ್ಬ ಸಾಕ್ಷಿದಾರರಾದ ಕಿರಣ್ ಆನಂದ್ ದಡ್ಡಿ, ಗಸ್ತು ಅರಣ್ಯ ಪಾಲಕ, ದೊಡ್ಡಬಳ್ಳಾಪುರ ಟೌನ್ ಗಸ್ತು, ದೊಡ್ಡಬಳ್ಳಾಪುರ ವಲಯ ದೊಡ್ಡಬಳ್ಳಾಪುರ ರವರು ದಿನಾಂಕ: 03/09/2025 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ವಿಭಾಗ ದೇವನಹಳ್ಳಿ ರವರ ನ್ಯಾಯಾಲಯದಲ್ಲಿ ಅರಣ್ಯ ಮೊಕದ್ದಮೆ ಸಂಖ್ಯೆ:09/2024-25 ದಿನಾಂಕ 28/07/2024ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದು, ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ಇವರಿಗೆ ಬಂದ ಖಚಿತ ವರ್ತಮಾನದಂತೆ ಮೇಲಿನನಾಯಕನಹಳ್ಳಿ ರಾಜ್ಯ ಅರಣ್ಯ ಪ್ರದೇಶದಲ್ಲಿ ಮರಕಡಿದು ಸಾಗಾಣಿಕೆ ಮಾಡುತ್ತಿರುವ ಮರಗಳ್ಳರನ್ನು ಹಿಡಿಯುವ ಸಲುವಾಗಿ ಸದರಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಗಸ್ತು ಮಾಡುವ ಸಂಧರ್ಭದಲ್ಲಿ ದಿನಾಂಕ: 28/07/2024 ಬೆಳಗಿನ ಜಾವ ಸುಮಾರು 3:00 ರಿಂದ 3:30 ಗಂಟೆ ಸಮಯದಲ್ಲಿ ಮೇಲಿನನಾಯಕನಹಳ್ಳಿ ರಾಜ್ಯ ಅರಣ್ಯ ಪ್ರದೇಶದಲ್ಲಿ ಒಂದು ಗೂಡ್ಸ್ ವಾಹನವು ಬಂದಿರುತ್ತದೆ. ಸದರಿ ವಾಹವನ್ನು ಸಿಬ್ಬಂದಿಗಳೊಂದಿಗೆ ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಸದರಿ ವಾಹನವು ಅಶೋಕ ಲೈಲ್ಯಾಂಡ್ ಗೂಡ್ಸ್ ವಾಹನವಾಗಿದ್ದು ವಾಹನ ಸಂಖ್ಯೆ: KA-43-A-1995 ಆಗಿರುತ್ತದೆ. ಸದರಿ ವಾಹನದಲ್ಲಿ ನೀಲಗಿರಿ ಮರಗಳನ್ನು ಕಡಿದು ತುಂಬಿರುವುದು ಕಂಡುಬಂದಿದ್ದು, ವಾಹನದಲ್ಲಿ ಮೂರು ಜನ ಆಸಾಮಿಗಳು ಇರುವುದು ಕಂಡುಬಂದಿರುತ್ತದೆ. ಸದರಿ ಕೃತ್ಯವು ಅರಣ್ಯ ಕಾನೂನಿನ ಉಲ್ಲಂಘನೆಯಾದ್ದರಿಂದ ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ರವರು ಅರಣ್ಯ ಮೊಕದ್ದಮೆ ದಾಖಲಿಸಲು ನಿರ್ಧರಿಸಿ, ಸದರಿ ಕೃತ್ಯದ ಬಗ್ಗೆ ಮಹಜರು ಜರುಗಿಸಿಕೊಡಲು ಕೋರಿದಾಗ ಸದರಿ ಪ್ರಕರಣದ ಮಹಜರ್ ಕ್ರಮಕ್ಕೆ ಸಹಕರಿಸಿರುತ್ತೇನೆ. ಸದರಿ ಮಹಜರ್‌ನಲ್ಲಿರುವ ಸಹಿ ತನ್ನದೇ ಆಗಿರುವುದಾಗಿ ಹೇಳಿಕೆ ನೀಡಿರುತ್ತಾರೆ.

9. ಅಭಿಯೋಜನೆ ಪರ ಮತ್ತೊಬ್ಬ ಸಾಕ್ಷಿದಾರರಾದ ಶ್ರೀ. ಕೃಷ್ಣೇಗೌಡ.ಕೆ.ಎಂ., ವಲಯ ಅರಣ್ಯ ಅಧಿಕಾರಿ ವಲಯ ಅರಣ್ಯಾಧಿಕಾರಿಗಳ ಕಛೇರಿ, ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ರವರು ದಿನಾಂಕ:03.09.2025 ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಇವರ ಸಮಕ್ಷಮ ಕಛೇರಿಯಲ್ಲಿ ಹಾಜರಾಗಿ ಅರಣ್ಯ ಮೊಕದ್ದಮೆ ಸಂಖ್ಯೆ: 09/2024-25 ದಿನಾಂಕ:28-07-2024ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದು, ದಿನಾಂಕ: 28-07-2024 ರಂದು ಶ್ರೀಮತಿ

ಲಕ್ಷ್ಮಿ ಹೆಚ್.ಡಿ., ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆರವರು ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಮರಗಳನ್ನು ಕತ್ತಾವಣೆ ಮಾಡಿ ಅಶೋಕ ಲೈಲ್ಯಾಂಡ್ ವಾಹನ ಸಂಖ್ಯೆ: KA-43 A-1995 ರಲ್ಲಿ ನೀಲಗಿರಿ ಸೌದೆಯನ್ನು ತುಂಬಿಕೊಂಡು ಬರುವಾಗ ಸದರಿ ವಾಹನವನ್ನು ನೀಲಗಿರಿ ಮರಗಳೊಂದಿಗೆ ಅಮಾನತ್ತು ಪಡಿಸಿಕೊಂಡು ವಲಯ ಕಛೇರಿಗೆ ಕರೆದುಕೊಂಡು ಬಂದು ಅರಣ್ಯ ಅಪರಾಧ ಪ್ರಕರಣ ಸಂಖ್ಯೆ: 09/2024-25ನ್ನು ದಿನಾಂಕ:28-07-2024 ದಾಖಲಿಸಿ ವಲಯ ಕಛೇರಿಗೆ ವರದಿ ನೀಡಿರುತ್ತಾರೆ. ಸದರಿ ಪ್ರರಕಣದ ತನಿಖಾಧಿಕಾರಿಯಾದ ತಾನು, ಪ್ರಕರಣದ ಮುಂದಿನ ತನಿಖೆಗಾಗಿ ದಿನಾಂಕ:28.07.2024 ರಂದು ಮೇಲಿನನಾಯಕರಂಡಹಳ್ಳಿ ಗ್ರಾಮದ ಸರ್ವೇ ನಂ 37ರ ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿರುವ ಜಾಗವನ್ನು ಪರಿಶೀಲಿಸಿ ನೋಡಲಾಗಿ ಸದರಿ ಸ್ಥಳದಲ್ಲಿ 47 ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿದ್ದು, ನೀಲಗಿರಿ ಮರಗಳ ಬುಡಗಳು ಸ್ಥಳದಲ್ಲಿರುವುದು ಕಂಡುಬಂದಿರುತ್ತದೆ. ಸದರಿ ಪ್ರಕರಣದಲ್ಲಿ ಅಮಾನತ್ತು ಪಡಿಸಿದ 4.50 ಘ.ಮೀ ನೀಲಗಿರಿ ಸೌದೆಗೂ ಸ್ಥಳದಲ್ಲಿರುವ ಬುಡಗಳಿಗೂ ಹೋಲಿಕೆ ಕಂಡುಬಂದಿರುತ್ತದೆ. ಮೇಲಿನನಾಯಕರಂಡಹಳ್ಳಿ ಗ್ರಾಮ, ಸರ್ವೇ ನಂ 37ರ ಪ್ರದೇಶವು ಮೇಲಿನನಾಯಕರಂಡಹಳ್ಳಿ ರಾಜ್ಯ ಅರಣ್ಯವಾಗಿದ್ದು, ಸದರಿ ಅರಣ್ಯ ಪ್ರದೇಶದಲ್ಲಿ ಅನುಮತಿಯಿಲ್ಲದೆ ಅಕ್ರಮವಾಗಿ ಪ್ರವೇಶ ಮಾಡಿ ನೀಲಗಿರಿ ಮರಗಳನ್ನು ಕಡಿದು ಸಾಗಾಣಿಕೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24(ಇ), 71(ಎ) ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144ರ ಉಲ್ಲಂಘನೆಯಾಗಿರುವುದರಿಂದ ಸದರಿ ಪ್ರಕರಣದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ವಿಚಾರಣಾ ವರದಿಯನ್ನು ತಯಾರಿಸಿ ಸಲ್ಲಿಸಿರುವುದು ಸತ್ಯವಾಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ.

10. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

A ಅಶೋಕ್ ಲೈಲ್ಯಾಂಡ್ ವಾಹನದ ನೋಂದಣಿ ಸಂಖ್ಯೆ ಕೆಎ-43-ಎ-1995 ಯನ್ನು ಬಳಸಿ ಒಟ್ಟು 4.5 ಘ.ಮೀ ನೀಲಗಿರಿ ಮರಗಳನ್ನು ಅಕ್ರಮವಾಗಿ ಕತ್ತಾವಣೆ ಮಾಡಿ ಸಾಗಿಸಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?

B ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) (1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?

C ಪ್ರಕರಣದಲ್ಲಿ ಅಮಾನತ್ತುಪಡಿಸಿದ 4.5 ಘ.ಮೀ ನೀಲಗಿರಿ ಮರಗಳು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?

D ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು' ಹಾಕಿಕೊಳ್ಳಬಹುದೇ?

E ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ A ಮತ್ತು B : ಸಕಾರಾತ್ಮಕವಾಗಿದೆ.

ಅಂಶ C ಮತ್ತು D : ಸಕಾರಾತ್ಮಕವಾಗಿದೆ.

ಅಂಶ E : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ A ರಿಂದ E ವರೆಗೆ ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

11. ದಿನಾಂಕ:28.07.2024 ರಂದು ಮುಂಜಾನೆ 3.00 ಗಂಟೆ ಸಮಯದಲ್ಲಿ ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ಮತ್ತು ಸಿಬ್ಬಂದಿಗಳು ಮೇಲಿನನಾಯಕರಂಡಹಳ್ಳಿ ಗಸ್ತಿನಲ್ಲಿದ್ದಾಗ ಮೇಲಿನನಾಯಕರಂಡಹಳ್ಳಿ ಗ್ರಾಮದ ಸರ್ವೆ ನಂ:37ರ ಅರಣ್ಯ ಪ್ರದೇಶದಲ್ಲಿ ಮೇಲಿನನಾಯಕರಂಡಹಳ್ಳಿ ಗ್ರಾಮದ ವಾಸಿಗಳಾದ 1) ಗಣೇಶ್ ಬಿನ್ ಲೇ|| ನಾರಾಯಣನಾಯ್ಕ, 2) ಸುಬ್ರಮಣ್ಯ ಬಿನ್ ಲೇ|| ಗುಂಡಾನಾಯ್ಕ, 3)ಕೃಷ್ಣನಾಯ್ಕ ಬಿನ್ ರೆಡ್ಡಿನಾಯ್ಕ ರವರುಗಳು ಅಕ್ರಮವಾಗಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ಕೆಎ-43-ಎ-1995 ಸಂಖ್ಯೆಯ ಅಶೋಕ್ ಲೈಲ್ಯಾಂಡ್ ವಾಹನದಲ್ಲಿ ಸಾಗಣೆ ಮಾಡುತ್ತಿದ್ದು ಅವುಗಳು ಒಟ್ಟು ಪರಿಮಾಣ 4.5 ಘ.ಮೀ ಇದ್ದು. ಅಕ್ರಮವಾಗಿ ರಾಜ್ಯ ಅರಣ್ಯ ಪ್ರದೇಶಕ್ಕೆ ಪ್ರವೇಶ ಮಾಡಿ ನೀಲಗಿರಿ ಮರಗಳನ್ನು ಕಡಿತಲೆ ಮಾಡಿ ಸಾಗಣೆ ಮಾಡುತ್ತಿ ವ ಆರೋಪದ ಮೇಲೆ ದೊಡ್ಡಬಳ್ಳಾಪುರ ವಲಯದಿಂದ ಮಾಲು ಮತ್ತು ಸಾಗಾಣಿಕೆಗೆ ಬಳಸಿದ ವಾಹನವನ್ನು ಜಪ್ತು ಪಡಿಸಿ, ಅರಣ್ಯ ಅಪರಾಧ ಪ್ರಕರಣ ಸಂಖ್ಯೆ: 09/2024-25ನ್ನು ದಿನಾಂಕ:28-07-2024 ರಂದು ದಾಖಲಿಸಿಕೊಂಡು, ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲಿನೊಂದಿಗೆ ವಾಹನವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 71(ಎ) ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ರವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಆರೋಪಿತರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24(e), 71(a) ಮತ್ತು ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144 ನ್ನು ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ.

12. ಅರಣ್ಯ ಅಪರಾಧ ಪ್ರಕರಣ ಸಂಖ್ಯೆ: 09/2024-25ರಲ್ಲಿನ ಜಪ್ತು ವಾಹನ ಸಂಖ್ಯೆ ಕೆಎ-43-ಎ-1995ರ ಮಾಲೀಕರಾದ ಶ್ರೀಮತಿ.ಲಕ್ಷ್ಮೀಬಾಯಿ ಕೋಂ ನಾರಾಯಣನಾಯ್ಕ ಇವರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ:07.12.2024, 20.12.2024, 27.05.2025, 21.07.2025, 29.07.2025, 20.08.2025 ಮತ್ತು 06.09.2025 ಹೊರಡಿಸಿ ಈ ನ್ಯಾಯಾಲಯದಿಂದ ವಾಹನದ ಮಾಲೀಕರ ಗಮನಕ್ಕೆ ತಂದು, ಸದರಿ ವಾಹದನ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿರುತ್ತದೆ. ವಾಹನ ಸಂಖ್ಯೆ ಕೆಎ-43-ಎ-1995ರ ಮಾಲೀಕರಾದ ಶ್ರೀಮತಿ.ಲಕ್ಷ್ಮೀಬಾಯಿ ಕೋಂ ನಾರಾಯಣನಾಯ್ಕ ಇವರು ವಾಹನದ ಮಾಲೀಕತ್ವದ ಬಗ್ಗೆ ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗಿ ಅರಣ್ಯ ಅಪರಾಧ ಮೊಕದ್ದಮೆ ಮೊ.ಸಂ:09/2024-25 ರಲ್ಲಿ ವಶಪಡಿಸಿಕೊಳ್ಳಲಾಗಿರುವ ಕೆಎ-43-ಎ-1995 ಅಶೋಕ್ ಲೈಲ್ಯಾಂಡ್ ವಾಹನವು ತನ್ನ ಹೆಸರಿನಲ್ಲಿದ್ದು ಸದರಿ ವಾಹನವನ್ನು ಬಾಡಿಗೆಗೆ ನೀಡುತ್ತಿದ್ದು ತನ್ನ ಮಗನಾದ ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ತನ್ನ ಗಮನಕ್ಕೆತಾರದೆ ಸದರಿ ವಾಹನವನ್ನು ನೀಲಗಿರಿ ಸೌದೆಯನ್ನು ತರಲು ತೆಗೆದುಕೊಂಡು ಹೋಗಿರುವುದಾಗಿ ಹೇಳಿಕೆ ನೀಡಿರುತ್ತಾರೆ.

13. ಅಭಿಯೋಜನೆಯವರ ಪರ ಪ್ರಕರಣದ ಸಾಕ್ಷಿದಾರರಾದ ಶ್ರೀಮತಿ ಲಕ್ಷ್ಮೀ ಹೆಚ್.ಡಿ., ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ರವರು ಈ ನ್ಯಾಯಾಲಯದಲ್ಲಿ ದಿನಾಂಕ:03.09.2025 ರಂದು ನಡೆದ ವಿಚಾರಣೆಗೆ ಸಾಕ್ಷಿದಾರರಾಗಿ ಹಾಜರಾಗಿ ತಮ್ಮ ಸಾಕ್ಷಿ ವಿಚಾರಣೆ ವೇಳೆ ಪಂಚನಾಮೆಯಲ್ಲಿನ ಮತ್ತು ಪ್ರಥಮ ವರ್ತಮಾನ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ದಿನಾಂಕ:28.07.2024 ರಂದು ಮುಂಜಾನೆ ಸುಮಾರು 3:00 ಗಂಟೆ ಸಮಯದಲ್ಲಿ ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ನೀಲಗಿರಿ ಮರಗಳನ್ನು ಸಾಗಾಣಿಕೆ ಮಾಡುತ್ತಿದ್ದ ಅಶೋಕ್ ಲೈಲ್ಯಾಂಡ್ ವಾಹನ ಸಂಖ್ಯೆ: ಕೆಎ-43-ಎ-1995 ರ ವಾಹನವನ್ನು ಮಾಲಿನ ಸಮೇತ ಅಮಾನತ್ತು ಮಾಡಿ ಅರಣ್ಯ ಅಪರಾಧ ಪ್ರಕರಣ

ದಾಖಲಿಸಲಾಗಿರುತ್ತದೆ. ಸದರಿ ದಿನದಂದು ಅಪರಾಧ ಪ್ರಕರಣ ನಡೆದಿರುವುದು ನಿಜವಾಗಿರುತ್ತದೆ. ಪ್ರಥಮ ವರ್ತಮಾನ ವರದಿಯನ್ನು ತಾನೇ ದಾಖಲಿಸಿ ತನಿಖೆಯ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ವಲಯ ರವರಿಗೆ ವರದಿ ನೀಡಿರುವುದಾಗಿ ಈ ನ್ಯಾಯಾಲದಲ್ಲಿ ಹೇಳಿಕೆ ನೀಡಿರುತ್ತಾರೆ. ಅಲ್ಲದೇ ಪಂಚ ಸಾಕ್ಷಿದಾರರಾದ ಶ್ರೀ. ಚಂದ್ರಶೇಖರಯ್ಯ, ಉಪ ವಲಯ ಅರಣ್ಯಾಧಿಕಾರಿ, ಎಸ್.ಎಸ್.ಘಾಟಿ ಶಾಖೆ, ದೊಡ್ಡಬಳ್ಳಾಪುರ ವಲಯ ಮತ್ತು ಶ್ರೀ. ಕಿರಣ್ ಆನಂದ್ ದಡ್ಡಿ, ಗಸ್ತ ಅರಣ್ಯ ಪಾಲಕ, ದೊಡ್ಡಬಳ್ಳಾಪುರ ಟೌನ್ ಗಸ್ತು, ದೊಡ್ಡಬಳ್ಳಾಪುರ ವಲಯ ರವರು ದಿನಾಂಕ:03.09.2025 ರಂದು ನಡೆದ ವಿಚಾರಣೆಗೆ ಸಾಕ್ಷಿದಾರರಾಗಿ ಈ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಸಾಕ್ಷಿ ವಿಚಾರಣೆ ವೇಳೆ ಸ್ಥಳ ಪಂಚನಾಮೆ ವರದಿಯಲ್ಲಿನ ತಮ್ಮ ಸಾಕ್ಷಿ ಸಹಿಗಳನ್ನು ಗುರುತಿಸಿದ್ದು, ದಿನಾಂಕ:28.07.2024 ರಂದು ಮುಂಜಾನೆ ಸುಮಾರು 3:00 ಗಂಟೆ ಸಮಯದಲ್ಲಿ ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ನೀಲಗಿರಿ ಸೌದೆಯನ್ನು ಸಾಗಾಣಿಕೆ ಮಾಡುತ್ತಿದ್ದ ಅಶೋಕ್ ಲೈಲ್ಯಾಂಡ್ ವಾಹನ ಸಂಖ್ಯೆ: ಕೆಎ-43-ಎ-1995 ವಾಹನವನ್ನು ಮಾಲಿನ ಸಮೇತ ಅಮಾನತ್ತು ಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿರುತ್ತದೆ. ಸದರಿ ದಿನದಂದು ಅಪರಾಧ ಪ್ರಕರಣ ನಡೆದಿರುವುದು ನಿಜವಾಗಿರುತ್ತದೆ, ಸದರಿ ಸಮಯದಲ್ಲಿ ಹಾಜರಿದ್ದು ಪಂಚನಾಮೇಗೆ ಸಹಕರಿಸಿರುವುದಾಗಿ ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳಾದ ಶ್ರೀ.ಕೃಷ್ಣೇಗೌಡ.ಕೆ.ಎಂ., ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ವಲಯ ರವರು ದಿನಾಂಕ:03.09.2025 ರಂದು ನಡೆದ ವಿಚಾರಣೆಗೆ ನ್ಯಾಯಾಲಯದಲ್ಲಿ ಹಾಜರಾಗಿ ದಿನಾಂಕ:28.07.2024 ರಂದು ಶ್ರೀಮತಿ ಲಕ್ಷ್ಮೀ ಹೆಚ್.ಡಿ., ಉಪ ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ಟೌನ್ ಶಾಖೆ ರವರು ಮೇಲಿನನಾಯಕರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ಅಶೋಕ್ ಲೈಲ್ಯಾಂಡ್ ವಾಹನ ಸಂಖ್ಯೆ: ಕೆಎ-43-ಎ-1995 ರಲ್ಲಿ ಸಾಗಾಣಿಕೆ ಮಾಡುತ್ತಿದ್ದ ವಾಹನವನ್ನು ನೀಲಗಿರಿ ಮರಗಳೊಂದಿಗೆ ಅಮಾನತ್ತು ಪಡಿಸಿಕೊಂಡು ಅರಣ್ಯ ಅಪರಾಧ ಪ್ರಕರಣ ಸಂಖ್ಯೆ:09/2024-25 ದಿನಾಂಕ:28.07.2024 ದಾಖಲಿಸಿ, ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ವರದಿ ನೀಡಿರುತ್ತಾರೆ. ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ದಿನಾಂಕ:28.07.2024 ರಂದು ಮೇಲಿನನಾಯಕರಂಡಹಳ್ಳಿ ಗ್ರಾಮದ ಸರ್ವೆ ನಂ:37ರ ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿರುವ ಜಾಗವನ್ನು ಪರಿಶೀಲಿಸಿ ನೋಡಲಾಗಿ ಸದರಿ ಸ್ಥಳದಲ್ಲಿ 47 ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿತಲೆ ಮಾಡಿದ್ದು ನೀಲಗಿರಿ ಬುಡಗಳು ಸ್ಥಳದಲ್ಲಿರುವುದು ಕಂಡುಬಂದಿರುತ್ತದೆ. ಅಮಾನತ್ತು ಪಡಿಸಿರುವ 4.5 ಘ.ಮೀ ನೀಲಗಿರಿ ಮರಗಳಿಗೂ ಸ್ಥಳದಲ್ಲಿರುವ ನೀಲಗಿರಿ ಬುಡಗಳಿಗೆ ತಾಳೆ ಇರುವುದು ಕಂಡುಬಂದಿರುತ್ತದೆ. ಮೇಲಿನನಾಯಕರಂಡಹಳ್ಳಿ ಗ್ರಾಮದ ಸರ್ವೆ ನಂ:37ರ ಪ್ರದೇಶವು ಸರ್ಕಾರದ ಅಧಿಸೂಚನೆ ಸಂಖ್ಯೆ:No.R.11448-Ft.48-04-8, Dated 16th May 1905 ರಂತೆ ಮೇಲಿನ ನಾಯಕರಂಡಹಳ್ಳಿ ರಾಜ್ಯ ಅರಣ್ಯವಾಗಿದ್ದು, ಸದರಿ ಅರಣ್ಯ ಪ್ರದೇಶದಲ್ಲಿ ಅನುಮತಿಯಿಲ್ಲದೆ ಅಕ್ರಮವಾಗಿ ಪ್ರವೇಶ ಮಾಡಿ ನೀಲಗಿರಿ ಮರಗಳನ್ನು ಕಡಿದು ಸಾಗಾಣಿಕೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24(e), 71(a) ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ನಿಯಮ 144ರ ಉಲ್ಲಂಘನೆಯಾಗಿರುವುದರಿಂದ ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ: 71(ಎ) ರ ಅನುಸಾರ ಕ್ರಮ ಕೈಗೊಳ್ಳಲು ವಿಚಾರಣಾ ವರದಿಯನ್ನು ತಯಾರಿಸಿ ಸಲ್ಲಿಸಿರುವುದು ಸತ್ಯವಾಗಿರುತ್ತದೆಂದು ಎಂದು ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ವಲಯ ರವರು ಈ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತಾರೆ.

14. ಅಭಿಯೋಜನ ಪರ ಸಾಕ್ಷಿಗಳ ವಿಚಾರಣೆಯ ವೇಳೆ ವಾಹನದ ಮಾಲೀಕರು/ ಅವರ ಪರ ವಕೀಲರು /ವಾರಸುದಾರರು ಗೈರು ಹಾಜರಾಗಿದ್ದು ಅಭಿಯೋಜನಪರ ವಿಚಾರಣೆ ನಡೆಸಲಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದಿಲ್ಲ. ಅಲ್ಲದೇ ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತು ಪಡಿಸಿಕೊಳ್ಳಲಾದ 4.5 ಘ.ಮೀ ನೀಲಗಿರಿ ಮರಗಳು/ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸಲು ಮತ್ತು ಸದರಿ ವಾಹನವು ಕೃತ್ಯ ನಡೆದ ದಿನದಂದು ಕಾನೂನುಬಾಹಿರ ಕೃತ್ಯದಲ್ಲಿ ಬಾಗಿಯಾಗಿಲ್ಲವೆಂದು ಸಾಬೀತುಪಡಿಸಲು ವಾಹನದ ಮಾಲೀಕರು ಅಥವಾ ಅವರ ಪರ ವಕೀಲರು

ಸಾಕ್ಷಿಗಳ ವಿಚಾರಣೆ ವೇಳೆ ವಿಫಲರಾಗಿರುತ್ತಾರೆ. ಅಲ್ಲದೇ ಪ್ರಕರಣದ ಆರೋಪಿತರಾದ 1) ಗಣೇಶ್ ಬಿನ್ ಲೇ|| ನಾರಾಯಣನಾಯ್ಕ, 2) ಸುಬ್ರಮಣ್ಯ ಬಿನ್ ಲೇ|| ಗುಂಡಾನಾಯ್ಕ, 3)ಕೃಷ್ಣನಾಯ್ಕ ಬಿನ್ ರೆಡ್ಡಿನಾಯ್ಕ ರವರುಗಳು ಕೃತ್ಯ ನಡೆದ ದಿನದಂದು ಅಕ್ರಮವಾಗಿ ನೀಲಗಿರಿ ಮರಗಳನ್ನು ಕತ್ತಾವಣೆ ಮಾಡಿ ಕೆಎ-43-ಎ-1995 ಸಂಖ್ಯೆಯ ಅಶೋಕ್ ಲೈಲ್ಯಾಂಡ್ ವಾಹನದಲ್ಲಿ ಸಾಗಣೆ ಮಾಡಿರುವುದು ಸತ್ಯವಾಗಿರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ.

15. ಅಲ್ಲದೇ ಸದರಿ ಪ್ರಕರಣದಲ್ಲಿನ ವಾಹನದ ಮಾಲೀಕರಾದ ಶ್ರೀಮತಿ ಲಕ್ಷ್ಮೀಬಾಯಿ ಕೋಂ ಲೇ|| ನಾರಾಯಣನಾಯ್ಕ ರವರು ದಿನಾಂಕ: 12.06.2025 ರಂದು ಈ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗಿ ಅ.ಮೊ.ಸಂ:09/2024-25 ರಲ್ಲಿ ವಶಪಡಿಸಿಕೊಂಡಿರುವ ಕೆಎ-43-ಎ-1995 ಅಶೋಕ್ ಲೈಲ್ಯಾಂಡ್ ವಾಹನವು ತನ್ನ ಹೆಸರಿನಲ್ಲಿದ್ದು ಸದರಿ ವಾಹನವನ್ನು ತಾನು ಬಾಡಿಗೆಗೆ ನೀಡುತ್ತಿದ್ದು ತನ್ನ ಮಗನಾದ ಗಣೇಶ್ ಬಿನ್ ಲೇ|| ನಾರಾಯಣನಾಯ್ಕ ತನ್ನ ಗಮನಕ್ಕೆತಾರದೆ ಸದರಿ ವಾಹನವನ್ನು ನೀಲಗಿರಿ ಸೌದೆಯನ್ನು ತರಲು ತೆಗೆದುಕೊಂಡು ಹೋಗಿರುತ್ತಾನೆ. ಸದರಿ ವಾಹನವು ತನ್ನ ಜೀವನಕ್ಕೆ ಆಧಾರವಾಗಿದ್ದು ಮಧ್ಯಂತರವಾಗಿ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ವಾಹನದ ಮಾಲೀಕರ ಕೋರಿಕೆಯನ್ನು ಪರಿಗಣಿಸಿದ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ Ashok Leyland, Goods Carrier ನೊಂದಣಿ KA-43-A-1995 ವಾಹನವನ್ನು ಭದ್ರತಾ ಠೇವಣಿಯ ಆಧಾರದ ಮೇಲೆ ತಾತ್ಕಾಲಿಕವಾಗಿ ವಾಹನದ ಮಾಲೀಕರ ವಶಕ್ಕೆ (interim custody) ಬಿಡುಗಡೆ ಮಾಡಲು, ವಲಯ ಅರಣ್ಯಾಧಿಕಾರಿ, ದೊಡ್ಡಬಳ್ಳಾಪುರ ವಲಯ, ದೊಡ್ಡಬಳ್ಳಾಪುರ ರವರ ಮುಖಾಂತರ KA-43-A-1995 ವಾಹನದ ಮೌಲ್ಯವನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ದೇವನಹಳ್ಳಿ ಇವರಿಂದ ಪಡೆದು, ಇಲಾಖಾ ವಿಧಿಸುವ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ (interim custody) ವಾಹನದ ಮಾಲೀಕರಾದ ಶ್ರೀಮತಿ ಲಕ್ಷ್ಮೀಬಾಯಿ ಕೋಂ ಲೇ|| ನಾರಾಯಣನಾಯ್ಕ ರವರಿಗೆ ಬಿಡುಗಡೆಗೊಳಿಸುವ ಬಗ್ಗೆ ಈ ನ್ಯಾಯಾಲಯದ ಅಧಿಕೃತ ಜ್ಞಾಪನ ಪತ್ರ ದಿನಾಂಕ:02.02.2026ರಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದಲ್ಲಿನ ಷರತ್ತುಗಳನುಸಾರ ವಾಹನದ ಮಾಲೀಕರು ತಾತ್ಕಾಲಿಕವಾಗಿ (interim custody) ತಮ್ಮ ವಶಕ್ಕೆ ಪಡೆಯುವ ಮುನ್ನ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ದೇವನಹಳ್ಳಿ ರವರು ನಿಗಧಿ ಪಡಿಸಿರುವ ವಾಹನದ ಮೌಲ್ಯ ರೂ. 2,50,000/- (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ)ಗಳಿಗೆ ಬ್ಯಾಂಕ್ ಭದ್ರತಾ ಠೇವಣಿ/ಗ್ಯಾರೆಂಟಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರ ಹೆಸರಿನಲ್ಲಿ ಪಡೆದು ಸಲ್ಲಿಸುವಂತೆ ಮತ್ತು ಭದ್ರತಾ ಠೇವಣಿ/ಗ್ಯಾರೆಂಟಿಗಳ ವಾಯಿದೆ ಮುಗಿಯುವುದರೊಳಗಾಗಿ ತಮ್ಮ ಸ್ವಂತ ವೆಚ್ಚದಲ್ಲಿ ನವೀಕರಿಸಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ಈ ನ್ಯಾಯಾಲಯದಿಂದ ಆದೇಶ ಹೊರಡಿಸಿ ಸುಮಾರು 06 ತಿಂಗಳುಗಳು ಕಳೆದರೂ ಸಹ ವಾಹನದ ಮಾಲೀಕರು ಈ ಕಛೇರಿಗೆ ರೂ. 2,50,000/- (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಗಳ ಬ್ಯಾಂಕ್ ಭದ್ರತಾ ಠೇವಣಿ/ಗ್ಯಾರೆಂಟಿಯನ್ನು ಸಲ್ಲಿಸಲು ವಿಫಲರಾಗಿರುತ್ತಾರೆ.

16. ಸರ್ಕಾರದ ಪರ ಅಭಿಯೋಜನಾ ಸಾಕ್ಷಿದಾರರು ಅಶೋಕ್ ಲೈಲ್ಯಾಂಡ್ ವಾಹನ ನೊಂದಣಿ ಸಂಖ್ಯೆ: ಕೆಎ-43-ಎ-1995 ರಲ್ಲಿ ಅಕ್ರಮವಾಗಿ ಅರಣ್ಯ ಪ್ರದೇಶದಿಂದ ನೀಲಗಿರಿ ಮರಗಳನ್ನು ಕತ್ತಾವಣೆಮಾಡಿ 4.5 ಘ.ಮೀ ನೀಲಗಿರಿ ಮರಗಳನ್ನು ಸಾಗಣೆಕೆ ಮಾಡುತ್ತಿರುವುದು ಸತ್ಯವಾಗಿರುವುದಾಗಿ ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಭೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿರುವ ಬಗ್ಗೆ ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರು ನಿರೂಪಿಸಿರುವುದಿಲ್ಲ. ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ. ಜಪ್ತಾದ ನೀಲಗಿರಿ ಮರಗಳನ್ನು ಅರಣ್ಯ ಪ್ರದೇಶದಲ್ಲಿ ಕತ್ತಾವಣೆ ಮಾಡಿದ್ದು ಸದರಿ ಮಾಲು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 'A, B' ಮತ್ತು 'C, D' ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ

ಅರಣ್ಯ ನಿಯಮ 1969 ಗಳನ್ನು ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆ, ಆರೋಪಿತರ ಹೇಳಿಕೆ ಮತ್ತು ದಾಖಲೆಗಳಿಂದ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

17. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಮೇರೆಗೆ, ಅರಣ್ಯೋತ್ಪನ್ನವಾದ 4.5 ಘ.ಮೀ ನೀಲಗಿರಿ ಮರಗಳನ್ನು ಅಕ್ರಮವಾಗಿ ಅರಣ್ಯ ಪ್ರದೇಶದಿಂದ ಕತ್ತಾವಣೆಮಾಡಿ, ಅಶೋಕ್ ಲೈಲ್ಯಾಂಡ್ ವಾಹನ ನೊಂದಣಿ ಸಂಖ್ಯೆ: ಕೆಎ-43-ಎ-1995 ರಲ್ಲಿ ಸಾಗಾಟ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ದೊಡ್ಡಬಳ್ಳಾಪುರ ವಲಯದ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲಿನೊಂದಿಗೆ ಕೃತ್ಯಕ್ಕೆ ಬಳಸಿದ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿರುತ್ತಾರೆ. ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುತ್ತದೆ. ಅಲ್ಲದೇ ಪ್ರಕರಣ ದಾಖಲಾಗಿ ಎರಡು ವರ್ಷಗಳು ಕಳೆದಿದ್ದು, ದಿನದಿಂದ ದಿನಕ್ಕೆ ವಾಹನ ಮತ್ತು ನೀಲಗಿರಿ ಮರಗಳು ತಮ್ಮ ಗುಣಮಟ್ಟ ಮತ್ತು ಮೌಲ್ಯವನ್ನು ಕಳೆದುಕೊಳ್ಳುತ್ತಿರುತ್ತವೆ. ಈ ಎಲ್ಲಾ ಅಂಶಗಳಿಂದ ಸದರಿ ಪ್ರಕರಣದಲ್ಲಿ ಒಳಗೊಂಡಿರುವ 4.5 ಘ.ಮೀ ನೀಲಗಿರಿ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ '' E '' ಈ ಕೆಳಕಂಡಂತೆ:

ಆದೇಶ

ನಾನು ಡಾ. ಸಂತೋಷ್ ಕುಮಾರ್ ಜಿ., ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದೊಡ್ಡಬಳ್ಳಾಪುರ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ:09/2024-25 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ Ashok Leyland, Goods Carrier ನೊಂದಣಿ ಸಂಖ್ಯೆ KA-43-A-1995 ವಾಹನ ಹಾಗೂ ಒಟ್ಟು 4.5 ಘ.ಮೀ ನೀಲಗಿರಿ ಮರಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ: 09-07-2026ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

'ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ'.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ

PR-1016

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು

ಅಧಿಸೂಚನೆ

ಕ್ರಮಾಂಕ: ಕಗೃಮಂ/ಭೂಸ್ವಾವಿ/ಬೆಂ.ಗ್ರಾ/ವಿಶ್ವನಾಥಪುರ-ಬ್ಲಾಕ್-2/52/2025-26

ದಿನಾಂಕ: 22ನೇ ಜುಲೈ 2026

ಕರ್ನಾಟಕ ಜನರಲ್ ಕ್ಲಾಸ್ ಆಕ್ಟ್ 1897 (ಆಕ್ಟ್ iii ಆಫ್ 1889 ಕಲಂ 21)ರಲ್ಲಿ ವಿಧಿತವಾದ ಅಧಿಕಾರದಂತೆ ಈ ಕಛೇರಿಯಿಂದ ಹೊರಡಿಸಲಾಗಿದ್ದ ಭೂಸ್ವಾಧೀನ ಕಾಯ್ದೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013ರ ಕಲಂ 11(1)ರ ಅಧಿಸೂಚನೆ ಸಂಖ್ಯೆ:ಕಗೃಮಂ / ಭೂಸ್ವಾವಿ/ಬೆಂ.ಗ್ರಾ/ವಿಶ್ವನಾಥಪುರ-ಬ್ಲಾಕ್-2/52/2025-26 ದಿನಾಂಕ: 07/01/2026ರ ಕರ್ನಾಟಕ ರಾಜ್ಯಪತ್ರ ದಿನಾಂಕ: 09/01/2026ರಲ್ಲಿ ಭಾಗ-3 ಪುಟ ಸಂಖ್ಯೆ: 824 ರಿಂದ 834 ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ವಿಶ್ವನಾಥಪುರ (ಬ್ಲಾಕ್-2) ಗ್ರಾಮದಲ್ಲಿ 163-38.04(ಎ-ಗು) ಜಮೀನುಗಳಿಗೆ ಸಂಬಂಧಿಸಿದ ಭೂಸ್ವಾಧೀನ ನಡವಳಿ ಪ್ರಕಟಣೆಯನ್ನು ಹಿಂತೆಗೆದುಕೊಳ್ಳಲಾಗಿದೆ.

ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

PD-109

GOVERNMENT OF KARNATAKA

NO: UDD 200 MNX 2026

Karanataka Government Secretariat
VikasaSoudha, 4th Floor
Dr. B.R. AmbedkarVeedhi,,
Bengaluru, Dated 20-07-2026

FINAL NOTIFICATION

Whereas the Government of Karnataka has sanctioned an improvement scheme i.e., for the "Formation of Peripheral Ring Road-2" (Part-II) Between Hosur Road - Mysore Road and Tumkur Road (Part-II) in the outskirts of Bangalore City by the Bangalore Development Authority vide Government Order No:UDD 399MNX 2006, Bangalore, Dated: 23.04.2007.

Now Therefore exercise of the powers conferred under Sub-Section (1) and (3) of Section 19 of Bangalore Development Authority Act 1976 (Karnataka Act No. 12 of 1976).The Government of Karnataka hereby declares that the lands specified in the schedule here below be the same a little more or less are needed for public purposes for the "formation of Peripheral Ring Road - 2" (Part-II) and in exercising the powers conferred by clause (C) of sec 3 and 7 of Land Acquisition Act 1894, read with Section 36 of the Bangalore Development Authority Act 1976, The Special Land Acquisition Officer, Bangalore Development Authority, Bangalore is here by appointed to perform the functions of the Deputy commissioner (land acquisition) under the said land acquisition act and directed to take order for the acquisition of the said land.

A plan of the lands is kept in the office of Special Land Acquisition Officer, Bangalore Development Authority, Bangalore T.Chowdaiah road, Bangalore-560020, for information.

The Preliminary Notification for the "formation of Peripheral Ring Road -2" (Part-II) has been published in the Karnataka gazette dated:29-04-2026 in part-3 page no.5254 to 5255 vide Preliminary Notification No: BDA/BBC80LAC/1/2026/BBC8, Bangalore, Dated 23.04.2026.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

INDEX

Name of the District	Name of the Taluk	Name of the Hobli	Village Name	Page No.
Bangalore Urban	Bangalore South	Beguru	Basavanapura	1

Sl No	Name of the Khathedars/AnubhavadarsSmts/Sriyuths	Sy No.	Hissa	Whether/Dry/ Wet/ Garden	Total Extent		Kharab Extent		Remaining Extent		Assessment	Extent Proposed for Acquisition		Boundaries			
					A	G	A	G	A	G		A	G	East	West	North	South
1	2	3	4	5	6		7		8		9	10		11	12	13	14
Village: Basavanapura Hobli: Begur Taluk: Bangalore South																	
01	Rashmidevi W/o Sajjanrao	9	3	Dry	4	30	0	21	4	9	9.90	3	2	Road	8/4, 7	9/2	9/3 Part

By order and in the name of the
Governor of Karnataka

(Rajesh S Sulikeri)
Under Secretary to Government
Urban Development Department.

PR-1017

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

P S BASAVARAJU